# ***4 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರವರ ನ್ಯಾಯಾಲಯ, ಮೈಸೂರು***

*ಎಸ್‌ಸಿ.* **160/2022**

| | | | |
|---|---|---|---|
| **ಸಾಕ್ಷಿದಾರರ ಹೆಸರು** | **:** ಶ್ರೀ ಸ್ವಾಮಿ | | *ಪ್ರಮಾಣ ಮಾಡಿಸಿದ ದಿನಾಂಕಃ* |
| **ತಂದೆ/ಗಂಡನ ಹೆಸರು** | **:** ಶ್ರೀ ರಾಮಗೋಪಾಲಶೆಟ್ಟಿ | | **18.12.2024** |
| **ವಯಸ್ಸು** | **:** **45** **ವರ್ಷ** | | |
| **ವೃತ್ತಿ** | **:** ವ್ಯವಸಾಯ | **ಪ್ರಾ.ಸಾ.** | **: 14** |
| **ವಾಸಸ್ಥಳ** | **:** ಹೆಮ್ಮರಗಾಲ | **ಚಾ.ಸಾ.** | **: 20** |

**ಮುಖ್ಯ ವಿಚಾರಣೆ : ಸರ್ಕಾರಿ ಅಭಿಯೋಜಕರಿಂದಃ**

. ಕೋರ್ಟ್ ಮುಂದೆ ಇರುವ ಆರೋಪಿತರ ಪರಿಚಯ ಇದೆ. ಚಾ.ಸಾ-1 ಸಿದ್ದರಾಜು ಇವರ ಪರಿಚಯ ಇದೆ. ಚಾ.ಸಾ-1 ಸಿದ್ದರಾಜು ಇವರ ಮಗ ಮಹೇಶ ಮರಣಹೊಂದಿದ್ದಾನೆ ಆದರೆ ಹೇಗೆ ಮರಣಹೊಂದಿದ್ದಾನೆ ಎಂದು ಗೊತ್ತಿಲ್ಲ. ಮಹೇಶ ಕಾಣೆಯಾದ ಬಗ್ಗೆ ಸಿದ್ದರಾಜು ನನ್ನ ಬಳಿ ಬಂದುಹೇಳಿಲ್ಲ ಮತ್ತು ಆ ಕಾಲಕ್ಕೆ ನಾನು ಅರುಣ, ಭರತ ಮತ್ತು ಮಹದೇವಸ್ವಾಮಿ ಇವರನ್ನು ಕರೆಸಿ ವಿಚಾರಿಸಿಲ್ಲ. ನಾನು ಹಳೇಪುರ ಕೆರೆ ಬಳಿ ಹೋಗಿ ಮಹೇಶನ ಶವ ನೋಡಿಲ್ಲ. ಮಹೇಶ ಮರಣಹೊಂದಿದಾಗ ಆರೋಪಿತರು ಊರಲ್ಲಿ ಇದ್ದರೋ ಇಲ್ಲವೊ ಗೊತ್ತಿಲ್ಲ. ಮಹೇಶ ಹೇಗೆ ಸತ್ತಿದ್ದಾನೆ ಎಂದು ಗೊತ್ತಿಲ್ಲ. ಆ ಬಗ್ಗೆ ಪೋಲೀಸರ ಮುಂದೆ ಹೇಳಿಕೆ ಕೊಟ್ಟಿಲ್ಲ.

***ಈ ಹಂತದಲ್ಲಿ, ಈ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯನ್ನಾಗಿ ಪರಿಗಣಿಸಿ ಪಾಟೀ ಸವಾಲು ಮಾಡಲು ಸರ್ಕಾರಿ ಅಭಿಯೋಜಕರು ಅನುಮತಿ ಕೋರಿದ್ದಾರೆ. ಸಾಕ್ಷಿಯ ಹೇಳಿಕೆಯನ್ನು ಪರಿಶೀಲಿಸಿ ಅನುಮತಿ ನೀಡಲಾಯಿತು.***

***ಪಾಟೀ ಸವಾಲುಃ ಸರ್ಕಾರಿ ಅಭಿಯೋಜಕರಿಂದಃ-***

*2.* ನಾನು ನಮ್ಮ ಬೀದಿಯ ಯಜಮಾನನಿರುತ್ತೇನೆ ಎಂದರೆ ನಿಜ. ದಿಃ*03.01.2022* ರಂದು ಬೆಳಗ್ಗೆ *8.45* ಕ್ಕೆ ಚಾ.ಸಾ*–1* ಸಿದ್ದರಾಜು ಇವರು ನನ್ನ ಬಳಿ ಬಂದು ಹಿಂದಿನ ದಿನ ಬೆಳಗ್ಗೆ *11* ಗಂಟೆಗೆ ತನ್ನ ಮಗ ಮಹೇಶ ತನ್ನ ಚಿಕ್ಕಪ್ಪನ ಮೊಮ್ಮಗ ಮಾದೇಶನ ಜೊತೆ ಆಟವಾಡುತ್ತಿದ್ದಾಗ ಅರುಣ, ಭರತ ಮತ್ತು ಮಹದೇವಸ್ವಾಮಿ ತನ್ನ ಮಗನನ್ನು ಕರೆದುಕೊಂಡು ಹೋಗಿದ್ದು ಸಂಜೆಯಾದರೂ ಮಹೇಶ ವಾಪಸ್ಸು ಬರದೇ ಇದ್ದಾಗ ಕೇಳಿದರೆ ತಮ್ಮ ಜೊತೆ ಬಂದಿಲ್ಲ ಎಂದು ಹೇಳುತ್ತಿದ್ದಾರೆ ಎಂದು ಹೇಳಿದ್ದ ಎಂದರೆ ಸರಿಯಲ್ಲ. ಆ ಕಾಲಕ್ಕೆ ನಾನು ಮತ್ತು ಗ್ರಾಮದ ಉಳಿದ ಯಜಮಾನರು ಆ ದಿನ ಬೆಳಗ್ಗೆ *9* ಗಂಟೆಗೆ ಅರುಣ ಮತ್ತು ಭರತ್ ಇವರನ್ನು ಮತ್ತು ಅವರ ಮನೆಯ ಜನರನ್ನು ಕರೆಸಿ ವಿಚಾರಿಸಿದಾಗ ಅವರು ಮಹೇಶನನ್ನು ಕರೆದುಕೊಂಡು ಹೋಗಿಲ್ಲ ಎಂದು ಹೇಳಿ ನಂತರ ಸಿದ್ದರಾಜುವಿಗೆ ಕಂಪ್ಲೇಂಟ್ ಕೊಡಿ ಎಂದು ಹೇಳಿದಾಗ ಅವರು ಹಳೇಪುರ ಕೆರೆಯಲ್ಲಿ ಕಾರು ತೋಳೆಯುವಾಗ ಮಹೇಶ ಮುಳುಗಿ ಮೃತ ಪಟ್ಟಿದ್ದಾನೆ ಎಂದು ಹೇಳಿದ್ದರಿಂದ ಎಲ್ಲರು ಹಳೇಪುರ ಕೆರೆ ಬಳಿ ಹೋಗಿ ನೋಡಿದಾಗ ಅಲ್ಲಿ ಬಿದಿರು ಮರದಲ್ಲಿ ಮಣ್ಣಿನ ಬೊಂಬೆ ಇಟ್ಟು ಪೂಜೆ ಮಾಡಿದ್ದು ಕಂಡುಬಂದಿತ್ತು ಎಂದರೆ ಸರಿಯಲ್ಲ. ಬಳಿಕ ಪೊಲೀಸರಿಗೆ ವಿಷಯ ತಿಳಿಸಿದಾಗ ಅವರು ಮೀನುಗಾರರನ್ನು ಕರೆಸಿ ಕೆರೆಯಲ್ಲಿ ಹುಡುಕಾಡಿಸಿದಾಗ ಮಹೇಶನ ಶವ ದೊರೆತಿತ್ತು ಎಂದರೆ ಸರಿಯಲ್ಲ. ಆ ನಂತರ ಸಿದ್ದರಾಜು ಅರುಣ, ಭರತ ಮತ್ತು ಮಹದೇವಸ್ವಾಮಿ ಮತ್ತು ಇತರರ ವಿರುದ್ಧ ದೂರು ಕೊಟ್ಟಿದ್ದ ಎಂದರೆ ನನಗೆ ಗೊತ್ತಿಲ್ಲ. ನಮ್ಮ

ಗ್ರಾಮದ ಶ್ರೀನಿವಾಸ ಶೆಟ್ಟಿ ಮತ್ತು ಅವರ ಕುಟುಂಬದವರು ಮೊದಲಿನಿಂದಲೂ ಪೂಜೆ ಪುನಸ್ಕಾರ ಮಾಡುವುದು, ಶಾಸ್ತ್ರ ಹೇಳುವುದು ಮಾಡುತ್ತಿದ್ದು ಶ್ರೀನಿವಾಸ ಶೆಟ್ಟಿಯವರ ಮಕ್ಕಳಾದ ಮುದ್ದಶೆಟ್ಟಿ ಮತ್ತು ರಾಜಣ್ಣ, ತಮ್ಮ ಮೊಮ್ಮಕ್ಕಳಾದ ಅರುಣ ಮತ್ತು ಮಹದೇವಸ್ವಾಮಿ ಮತ್ತು ಅವರ ಸ್ನೇಹಿತ ಭರತ್ ಇವರ ಮೂಲಕ ಮಹೇಶನನ್ನು ಜೀಪಿನಲ್ಲಿ ಕರೆದುಕೊಂಡು ಹೋಗುವಂತೆ ತಿಳಿಸಿ ನಂತರ ವಾಮಚಾರ ಪೂಜೆ ಮಾಡಿ ಅರುಣ, ಮಹದೇವಸ್ವಾಮಿ ಮತ್ತು ಭರತ್ ಇವರ ಮೂಲಕ ಮಹೇಶನನ್ನು ಕೆರೆಗೆ ತಳ್ಳಿ ಸಾಯಿಸಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ದಿಃ***03.01.2022*** ರ ಪಂಚಾಯಿತಿ ಕಾಲಕ್ಕೆ ಮಹೇಶ ಕಾಲು ಜಾರಿ ಬಿದಿದ್ದಾನೆ ಎಂದು ಹೇಳಿದ್ದು ಸುಳ್ಳೆಂದು ನನಗೆ ಆ ಕಾಲಕ್ಕೆ ಗೊತ್ತಾಗಿತ್ತು ಎಂದರೆ ಸರಿಯಲ್ಲ. ಮಹೇಶನ ಶವ ದೊರೆತ ಕೂಡಲೇ ಶ್ರೀನಿವಾಸ ಶೆಟ್ಟಿ, ಮುದ್ದ ಶೆಟ್ಟಿ, ರಾಜಣ್ಣ, ಅರುಣ, ಮಹದೇವಸ್ವಾಮಿ, ಭರತ ಇವರು ಊರು ಬಿಟ್ಟು ತಲೆ ಮರೆಸಿಕೊಂಡಿದ್ದರು ಎಂದರೆ ಸರಿಯಲ್ಲ. ಈ ಬಗ್ಗೆ ನನ್ನ ಹೇಳಿಕೆ ಕೊಟ್ಟಿದ್ದೇನೆ ಎಂದರೆ ಸರಿಯಲ್ಲ. ಸದರಿ ಹೇಳಿಕೆಯನ್ನು ನಿ.ಪಿ–***26*** ಎಂದು ಗುರುತಿಸಿದೆ. ಈಗ ಆರೋಪಿತರಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಪಾಟೀ ಸವಾಲು : ಆರೋಪಿ ಪರ ವಕೀಲರವರಿಂದಃ- ಇಲ್ಲ**

**ಮರು ವಿಚಾರಣೆಃ- ಇಲ್ಲ.**

ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.

*ಓ ಹೇ ಕೇ ಸ ಇ ಎ ಒ.,*

*4 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,*
ಮೈಸೂರು